## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 27/9/2020

# ಸುಬ್ಬಯ್ಯ, ಬಣಕಾರ್ ಜೀವನ ಮಾದರಿ

27/9/20

**ಬೆಂಗಳೂರು:** ಸಂಸದೀಯ ಪಟುಗಳಾದ ಎ.ಕೆ. ಸುಬ್ಬಯ್ಯ, ಮಹದೇವ ಬಣಕಾರ್ ಅವರ ಜೀವನ ಸಾರ್ವಜನಿಕ ಜೀವನದಲ್ಲಿರುವ ಹಲವರಿಗೆ ಮಾದರಿ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನಮಂಡಲದ ವತಿಯಿಂದ ಪ್ರಕಟಿಸಲಾದ ಸಂಸದೀಯ ಪಟುಗಳಾದ ದಿ. ಎ.ಕೆ. ಸುಬ್ಬಯ್ಯ ಹಾಗೂ ದಿ. ಡಾ. ಮಹದೇವ ಬಣಕಾರ್ ಅವರ ಕುರಿತ ಪುಸ್ತಕಗಳನ್ನು ಬಿಡುಗಡೆ ಮಾಡಿ ಮಾತನಾಡಿದರು. ಎ.ಕೆ. ಸುಬ್ಬಯ್ಯ ಅವರು ವಿದ್ಯಾರ್ಥಿ ಜೀವನದಲ್ಲೇ ನಾಯಕರಾಗಿದ್ದವರು. ಹಲವು ರಾಜಕೀಯ ನಾಯಕರಿಗೆ ಸ್ಫೂರ್ತಿಯಾಗಿದ್ದವರು ಎಂದು ಸ್ಮರಿಸಿದರು. ಮಹದೇವ ಬಣಕಾರ್ ಅವರು ರಂಗಭೂಮಿ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಮಾತನಾಡಿದರು. ಸಚಿವ ಸಿ.ಟಿ.ರವಿ, ಎಸ್.ಟಿ.ಸೋಮಶೇಖರ್, ಕೆ.ಆರ್. ರಮೇಶ್ ಕುಮಾರ್, ಎಸ್.ಆರ್. ಪಾಟೀಲ್, ಕೆ.ಜೆ. ಜಾರ್ಜ್ ಇತರರು ಇದ್ದರು.



**ದಿ. ಎ.ಕೆ. ಸುಬ್ಬಯ್ಯ ಹಾಗೂ ದಿ. ಡಾ. ಮಹದೇವ ಬಣಕಾರ್ ಅವರ ಕುರಿತ ಪುಸ್ತಕಗಳನ್ನು ಸಿಎಂ ಯಡಿಯೂರಪ್ಪ ಬಿಡುಗಡೆ ಮಾಡಿದರು.**